**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.**

**ಓ.ಎಸ್. ನಂಃ135/2019 ಪಿ.ಡಬ್ಲೂಃ 01**

ಸಾಕ್ಷಿಯನ್ನು ಇಂದು ದಿನಾಂಕಃ 20.09.2022 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ** ವಾದಿ ಪರ ಶ್ರೀ.**ಟಿ.ಎಂ.ಎಸ್** ವಕೀಲರಿಂದಃ

ನಾನು ಈ ದಾವೆಯಲ್ಲಿ ವಾದಿಯಾಗಿದ್ದು, ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳು ನನಗೆ ತಿಳಿದಿದ್ದು, ಪ್ರಮಾಣ ಪತ್ರವನ್ನು ನನ್ನ ಸೂಚನೆಯ ಮೇರೆಗೆ ತಯಾರಿಸಲಾಗಿದೆ. ಅದಕ್ಕೆ ನಾನು ರುಜು ಮಾಡಿರುತ್ತೇನೆ.

ನಾನು ಪಡಿತರ ಪುಸ್ತಕವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು, ಆಧಾರ ಕಾರ್ಡನನ್ನು ನಿಪಿ-2 ಎಂದು, ವಾಸಸ್ಥಳ ದೃಡೀಕರಣ ಪತ್ರವನ್ನು ನಿಪಿ-3 ಎಂದು, ರಾಷ್ಟ್ರಿಯ ಜನಸಂಖ್ಯಾ ರಿಜಿಸ್ಟರನ ಸ್ವೀಕತಿ ಚೀಟಿಯನ್ನು ನಿಪಿ-4 ಎಂದು, 2011 ರ ಸಾಮಾಜಿಕ, ಆರ್ಥಿಕ ಮತ್ತು ಜಾತಿ ಗಣತಿ ಸ್ವೀಕತಿ ಪತ್ರವನ್ನು ನಿಪಿ-5 ಎಂದು, ಜನಸ್ಪಂದನಾ ಸಭೆಯ ಸ್ವೀಕೃತಿ ರಸೀದಿಯನ್ನು ನಿಪಿ-6 ಎಂದು, ಆದಾಯ ದೃಡೀಕರಣ ಪತ್ರದ ದೃಡೀಕೃತ ನಕಲನ್ನು ನಿಪಿ-7 ಎಂದು, ಒಂದು ದಿನಪತ್ರಿಕೆಯನ್ನು ನಿಪಿ-8 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ವಾದಿ ಪರ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**

**ನ್ಯಾಯಾಲಯ ತಿ.ನರಸೀಪುರ.**